(೪) ಬೆಂಗಳೂರಿನಿಂದ ಭಟ್ಕಳ್‌ವರೆಗೆ ಶಿವಮೊಗ್ಗ ಹೊಸನಗರ ಮಾರ್ಗವಲ್ಲಿ ಸೆಮಿಲಕ್ಸ್ಜುರಿ ಬಸ್ಸನ್ನು ಓಡಿಸುವುದು

ಶ್ರೀ ಡಿ.ಜಿ. ಬಸವನಗೌಡ.—ಬೆಂಗಳೂರಿನಿಂದ ಭಟ್ಕಳ್‌ವರೆವಿಗೆ ಶಿವಮೊಗ್ಗ, ಹೊಸನಗರ ಮಾರ್ಗವಾಗಿ ಸೆಮಿಲಕ್ಸ್ಜುರಿ ಬಸ್ಸನ್ನು ಓಡಿಸಲು ಸಾರಿಗೆ ಸಂಸ್ಥೆಯನ್ನು ಅನೇಕ ಬಾರಿ ಕೇಳಿದ್ದಾಗ್ಯೂ ಇದುವರೆವಿಗೂ ಕ್ರಮಕ್ಕೆಗೊಳ್ಳದಿರುವ ಬಗ್ಗೆ, ಸಾರಿಗೆ ಸಚಿವರನ್ನು ಕೇಳುವ ವಿಚಾರ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಮಾನ್ಯ ವೀರಣ್ಣನವರು ಕೌನ್ಸಿಲ್‌ಗೆ ಹೋಗಿದ್ದಾರೆ ನಾನು ಮಾನ್ಯ ಸದಸ್ಯರ ವಿಚಾರವನ್ನು ಅವರ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ನಾವು ಗಮನ ಸೆಳೆಯುವುದು ನಮಗೆ ಪರಿಹಾರ ಸಿಕ್ಕಬೇಕೆಂಬ ಉದ್ದೇಶದಿಂದ.

ಅಧ್ಯಕ್ಷರು.—ಸದನದ ಗಮನಕ್ಕೆ ತರಬೇಕಾದ್ದು ನಿಮ್ಮ ಕರ್ತವ್ಯ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಮಂತ್ರಿಗಳು ಕೌನ್ಸಿಲ್‌ಗೆ ಹೋಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕೌನ್ಸಿಲ್‌ನಲ್ಲಿ ಇಲ್ಲ.

ಅಧ್ಯಕ್ಷರು.—ಇಲ್ಲ ಎಂದು ನೀವು ಹೇಗೆ ಹೇಳುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ತಮ್ಮ ಮುಂದೆ ಜವಾಬ್ದಾರಿಯಿಂದ ಹೇಳುತ್ತೇನೆ. ಸನ್ಮಾನ್ಯ ವೀರಣ್ಣನವರು ಸರ್ಕಾರಿ ಕೆಲಸದ ನಿಮಿತ್ತ ಅಲ್ಲೇ ಇದ್ದಾರೆ. ಈ ರೀತಿ ನಾನು ಹೇಳುವಾಗ ನೀವು ನೋಡಿದಿರಾ ಎಂದು ಉಪನಾಯಕರು ಕೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆ ರೀತಿ ಅಲ್ಲ.

ಅಧ್ಯಕ್ಷರು.—ಅದು ಹೇಗೆ ಗೊತ್ತು ಎನ್ನುವ ಧಾಟಿಯಲ್ಲಿ ಹೇಳಿದಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ಸದನದಲ್ಲಿ ನಾವು ಪ್ರಸ್ತಾಪ ಮಾಡತಕ್ಕದ್ದನ್ನು ಗಮನಕೊಟ್ಟು ಕೇಳಿ ಅದಕ್ಕೆ ಉತ್ತರ ಕೊಡಲಿ ಎಂದು ಪ್ರಸ್ತಾಪ ಮಾಡುತ್ತೇವೆ. ಇಲ್ಲಿ ಕೇಳುವವರು ಇಲ್ಲ ಎಂದರೆ ಹೇಗೆ ?

(ಗೊಂದಲ)

ಶ್ರೀ ಬಿ.ಹೆಚ್. ಯಂಕನಾಯಕ್ (ಗೈರುಹಾಜರು).—

(೫) ಬಿಜಾಪುರದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಪೋಲೀಸ್ ಸ್ಟೇಷನನ್ನು ಪ್ರಾರಂಭಿಸುವುದು

ಶ್ರೀ ಎಂ.ಎಲ್. ಉಸ್ತಾದ್.—ಬಿಜಾಪುರ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರದೇಶದಲ್ಲಿ ಹೊಸ ಪೋಲೀಸು ಸ್ಟೇಷನ್ ಅಕ್ಟೋಬರ್ ಜೂನ್ ಕಡೆಯಲ್ಲಿ ಪ್ರಾರಂಭಿಸಲಾಗುವುದೆಂದು ಕಳೆದ ಅಧಿವೇಶನದಲ್ಲಿ ಸದನಕ್ಕೆ ಆಶ್ವಾಸನೆ ನೀಡಲಾಗಿದ್ದಿತು. ಈವರೆಗೂ ಈ ಕೆಲಸ ಪ್ರಾರಂಭವಾಗಿರುವುದಿಲ್ಲ. ನುಡಿದಂತೆ ನಡೆಯಬೇಕೆಂದು ಎಲ್ಲರಿಗೂ ಬುದ್ಧಿವಾದ ಹೇಳುವವರು ತಾವೇ ನಡೆಯಲಿಲ್ಲವೇಕೆ ಎಂಬುದನ್ನು ಈ ಸದನಕ್ಕೆ ಹೇಳಿಕೆ ಮೂಲಕ ತಿಳಿಸಬೇಕೆಂದು ಒತ್ತಾಯಿಸುತ್ತೇನೆ. ಸಾರ್ವಜನಿಕ ಹಿತ ದೃಷ್ಟಿಯಿಂದ ಪೋಲೀಸ್ ಸ್ಟೇಷನ್‌ನ ಅವಶ್ಯಕತೆ ಬಹಳ ಇರುವುದರಿಂದ ಕೂಡಲೇ ಸಂಬಂಧಪಟ್ಟವರಿಗೆ ಈ ಬಗ್ಗೆ ಆದೇಶ ನೀಡುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಬಿಜಾಪುರ ಮಾರುಕಟ್ಟೆ ಆವರಣದಲ್ಲಿ ಹೊಸ ಆರಕ್ಷಕ ಠಾಣೆಗೆ ಕೆಳಕಂಡ ಸಿಬ್ಬಂದಿ ಬೇಕಾಗುತ್ತದೆ.

ಆರಕ್ಷಕ ಉಪ ನಿರೀಕ್ಷಕರುಗಳು	—೨
ಸಹಾಯಕ ಆರಕ್ಷಕ ಉಪ ನಿರೀಕ್ಷಕರು	—೧
ಮುಖ್ಯ ಹೆಡ್‌ಗಳು	—೮
ಪೇದೆಗಳು	—೪೦

ಇದಕ್ಕೆ ತಗಲುವ ವಾರ್ಷಿಕ ಪೆಚ್ಚು ರೂ. ೭,೩೮,೨೬೪ಳ ಮತ್ತು ಅನಾವರ್ತಕ ವೆಚ್ಚ ರೂ. ೬೨,೫೦೦. ಈ ಎಲ್ಲಾ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಬೇಕಾದುದರಿಂದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಸಮಯದಲ್ಲಿ ಈ ಶಾಖೆಯು ಪ್ರಾರಂಭವನ್ನು ಪರಿಗಣಿಸಲಾಗುವುದು.

(೬) ಮಲೆನಾಡಿನಲ್ಲಿ ಕುಡಿಯುವ ನೀರಿನ ಸೇದುವ ಬಾವಿಗಳನ್ನು ತೋಡಿಸುವುದು

ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೆ, ಮಲೆನಾಡಿನಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡಲು ಕೊಳವೆ ಬಾವಿಗಳನ್ನು ಸಾಕಷ್ಟು ತೋಡಿಸಿದ್ದು ಅರ್ಧಕ್ಕೂ ಮೇಲ್ಪಟ್ಟು ಬಾವಿಗಳು ಸಾಕಷ್ಟು ನೀರು ಸಿಕ್ಕದೇ ನಿರುಪಯುಕ್ತವಾಗಿವೆ. ಅಲ್ಲದೆ ನೀರು ದೊರೆತ ಬಾವಿಗಳಲ್ಲಿ ಅರ್ಧ ಭಾಗದಷ್ಟು ಬಾವಿಗಳಲ್ಲಿ ಜ್ಲಾಕಿಷ್ ಅಥವಾ ಕೆಲುಬು ನೀರು ಬಿದ್ದು ಉಪಯೋಗಕ್ಕೆ ಅನರ್ಹವಾಗಿರುತ್ತವೆ. ಸ್ನಾನ ಮಾಡಲು ಬಟ್ಟೆ ಒಗೆಯಲೂ ಸಹಾ ಅನರ್ಹವಾದ ನೀರಾಗಿರುತ್ತದೆ. ಎರಡು ಬಾವಿಗಳು ನಿರುಪಯುಕ್ತವಾದಲ್ಲಿ ಸೇದುವ ಬಾವಿಗಳನ್ನು ಅಂಥ ಊರುಗಳಲ್ಲಿ ತೋಡಿಸಬೇಕೆಂದು ಆದೇಶವಿದ್ದರೂ ಈ ಬಗ್ಗೆ ಯಾರೂ ಗಮನ ಕೊಟ್ಟಿರುವುದಿಲ್ಲ. ಇದೇ ರೀತಿ ಮುಂದುವರಿದಲ್ಲಿ ಕುಡಿಯುವ ನೀರಿಗೆ ಮಲೆನಾಡಿನಲ್ಲಿ ಹಾಹಾಕಾರವಾಗುತ್ತದೆ. ಆದ್ದರಿಂದ ಸರ್ಕಾರದವರು ಕೂಡಲೇ ಸೇದುವ ಬಾವಿಗಳನ್ನು ಮಲೆನಾಡಿನಲ್ಲಿ ತೋಡಬೇಕೆಂದು ಸಂಬಂಧಪಟ್ಟ ಗ್ರಾಮಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು, ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಈ ವಿಚಾರವನ್ನು ಮಾನ್ಯ ಗ್ರಾಮೀಣ ಅಭಿವೃದ್ಧಿ ಖಾತೆಯ ಮಂತ್ರಿಗಳಿಗೆ ತಿಳಿಸಿ ಸೂಕ್ತ ಕ್ರಮ ತೆಗೆದು ಕೊಳ್ಳುವಂತೆ ಹೇಳುತ್ತೇನೆ.

(೭) ಶಹಬಾದಿನಲ್ಲಿ ಪರಿಶಿಷ್ಟ ಜಾತಿಯವರಿಗೆ ಸ್ಮಶಾನದ ಜಾಗವನ್ನು ಕಾದಿರಿಸುವುದು

ಶ್ರೀ ಕೆ.ಬಿ. ಶಾಣಪ್ಪ (ಶಹಬಾದ್).—ಮಾನ್ಯ ಅಧ್ಯಕ್ಷರೆ, ಶಹಬಾದು ಸುಮಾರು ೬೦,೦೦೦ ಜನಸಂಖ್ಯೆಯುಳ್ಳ ನಗರವಾಗಿದೆ, ಇಲ್ಲಿ ಪ್ರತಿಯೊಂದು ಸಮಾಜದವರೂ ತಮ್ಮದೇ ಆದ ಸ್ಮಶಾನ ಭೂಮಿಯನ್ನು ತಮ್ಮ ಜನರಿಗೆ ಶವವನ್ನು ಹೂಳಲು ಮಾಡಿಕೊಂಡಿದ್ದಾರೆ. ಆದರೆ ಪರಿಶಿಷ್ಟ ಜಾತಿಯ ಸುಮಾರು ೨೨,೦೦೦ ಜನರಿದ್ದು ಅವರಿಗೆ ತಮ್ಮ ಜನರು ಸತ್ತಾಗ ಹೂಳಲು ಯಾವುದೇ ಜಮೀನೂ ಇಲ್ಲ. ಆದರಲ್ಲೂ ಕೊಳಸಾಬೈಲು, ಇಂದಿರಾನಗರ, ಎ.ಸಿ.ಸಿ. ಕಾಲೋನಿಯ ಈ ಜನರಿಗೆ ಇಂಥ ಸಂದರ್ಭದಲ್ಲಿ ಯಾರದ್ದೋ ಹೊಲದಲ್ಲಿ ಹೂಳಲು ಹೋದಾಗ ಹೊಲದ ಒಡೆಯ ತಕರಾರು ಮಾಡುವುದರಿಂದ ಅನೇಕ ಕಷ್ಟನಷ್ಟಗಳನ್ನು ಈ ಜನಾಂಗ ಅನುಭವಿಸುತ್ತಾ ಬಂದಿದ್ದಾರೆ. ಕೊಳಸಾಬೈಲು ಮತ್ತು ಇಂದಿರಾನಗರದ ಈ ಪರಿಶಿಷ್ಟ ಜನಾಂಗಕ್ಕೆ ತಮ್ಮದೇ ಆದ ಒಂದು ಸ್ಮಶಾನ ಭೂಮಿಯನ್ನು ನಗರ ಪಾಲಿಕೆಯವರು ಒದಗಿಸಿಕೊಡಬೇಕು ಮತ್ತು ಆ ಹೊಲದ ಒಡೆಯರಿಗೆ ಪರಿಹಾರ ಧನವನ್ನು ನಗರ ಪಾಲಿಕೆಯವರು ಕೊಡಬೇಕು. ಆದರೆ ನಗರಪಾಲಿಕೆಯವರ ಹತ್ತಿರ ಹಣವಿಲ್ಲ. ಈ ಒಂದು ಜರೂರು ಪರಿಸ್ಥಿತಿಯನ್ನು ಅರಿತು ಕರ್ನಾಟಕ ಸರ್ಕಾರ ವಿಶೇಷ ಧನಸಹಾಯವನ್ನು ತಕ್ಷಣ ಒದಗಿಸಿಕೊಡಲು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ತಕ್ಷಣ ಉತ್ತರ ಹೇಳುವುದಕ್ಕೆ ನನ್ನ ಹತ್ತಿರ ಮಾಹಿತಿ ಇಲ್ಲ. ಪರದಿಯನ್ನು ತರಿಸಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

(೮) ಬೈಂದೂರಿನ ಪಡುವರಿ ಗ್ರಾಮಕ್ಕೆ ಕುಡಿಯುವ ನೀರಿನ ತೊಂದರೆಯನ್ನು ನಿವಾರಿಸುವುದು

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡದ ಅತಿ ಅಲಕ್ಷಿತ ಕ್ಷೇತ್ರ ಬೈಂದೂರು ಅಲ್ಲಿನ ಪಡುವರಿ ಗ್ರಾಮ ಪಡುಗಡಲ ತೀರದ ತೀರ ಹಿಂದುಳಿದ ಹಳ್ಳಿ ಬಡ ಬೇಸಾಯಗಾರರು, ಕೃಷಿ ಕಾರ್ಮಿಕರು, ಅತಿ ಚಿಕ್ಕ ವ್ಯಾಪಾರಿಗಳು, ಮೀನುಗಾರರು ಇರುವ ಪಡುವರಿಯಲ್ಲಿ ಕುಡಿಯುವ ನೀರಿನದ್ದೇ ದೊಡ್ಡ ಸಮಸ್ಯೆ. ಬಹಳ ಸಾಮಾನ್ಯವಾಗಿ ಜನ ಪ್ರತಿನಿಧಿಗಳ ಒತ್ತಾಯದ ಪರಿಣಾಮ ಶುಚಿತ್ವ ನೀರು ಸರಬರಾಜು ಯೋಜನೆಯು ಮಂಜೂರಾತಿ. ಕಲಸ ಆರಂಭವಾಗಿ ವರುಷಗಳೇ